35

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪುಟ್ಟಣ್ಣ ಇವರ ನಿಯಮ 330ರ ಸೂಚನಾ ಪತ್ರಕ್ಕೆ ಉತ್ತರಿಸುವ ಕುರಿತು.**

**ಪ್ರಶ್ನೆ**

ರಾಜ್ಯದಲ್ಲಿ ಪ್ರತಿವರ್ಷ ಮಾರ್ಚ್ ಏಪ್ರಿಲ್‌ನಲ್ಲಿ ಎಸ್.ಎಸ್.ಎಲ್.ಸಿ ಮತ್ತು ದ್ವಿತೀಯ ಪಿ.ಯು.ಸಿ ವಾರ್ಷಿಕ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಎರಡು ಮೂರು ವಾರ್ಷಿಕ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಈ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ಪ್ರತಿ ವರ್ಷ ಸಕಾಲದಲ್ಲಿ ಸಾವಿರಾರು ಶಿಕ್ಷಕರು ಮತ್ತು ಉಪನ್ಯಾಸಕರು ಮೌಲ್ಯಮಾಪನವನ್ನು ಸಕಾಲದಲ್ಲಿ ಮಾಡುತ್ತಾರೆ. ಮೌಲ್ಯಮಾಪನ ಮಾಡುವ ಶಿಕ್ಷಕರು ಹಾಗೂ ಉಪನ್ಯಾಸಕರಿಗೆ ಇಲಾಖೆಯಿಂದ ಪ್ರತಿ ಉತ್ತರ ಪತ್ರಿಕೆಗೆ ಇಂತಿಷ್ಟು ಹಣವನ್ನು ನಿಗದಿಗೊಳಿಸಿ ಮೌಲ್ಯಮಾಪನ ಮಾಡಿಸಲಾಗುತ್ತಿದೆ. ಆದರೆ ಸಕಾಲದಲ್ಲಿ ಮೌಲ್ಯಮಾಪನ ಮಾಡಿದ ಶಿಕ್ಷಕರು ಹಾಗೂ ಉಪನ್ಯಾಸಕರಿಗೆ ನೀಡಬೇಕಾದ ಮೌಲ್ಯಮಾಪನ ಭತ್ಯೆಯನ್ನು ಸಕಾಲದಲ್ಲಿ ನೀಡದೆ ತುಂಬಾ ವಿಳಂಬ ಮಾಡಲಾಗುತ್ತಿದ್ದು ಈ ವಿಷಯವು ಹಲವಾರು ಪತ್ರಿಕೆಗಳಲ್ಲಿಯೂ ಬರುತ್ತಿರುವುದು ವಿಷಾದನೀಯವಾಗಿದೆ. ಆದ್ದರಿಂದ ಮೌಲ್ಯಮಾಪನ ಭತ್ಯೆಯನ್ನು ಸಕಾಲಕ್ಕೆ ನೀಡಬೇಕೆಂಬ ವಿಷಯವನ್ನು ನಿಯಮ 330ರಲ್ಲಿ ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರಲ್ಲಿ ಪ್ರಸ್ತಾಪಿಸುತ್ತೇನೆ.

**ಉತ್ತರ**

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿಯಿಂದ 2024-25 ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮತ್ತು ದ್ವಿತೀಯ ಪಿ.ಯು ಪರೀಕ್ಷೆಗಳನ್ನು ಪರೀಕ್ಷೆ- 01, ಪರೀಕ್ಷೆ- 02 ಮತ್ತು ಪರೀಕ್ಷೆ-03 ಎಂದು ಮೂರು ಹಂತದಲ್ಲಿ ನಡೆಸಲಾಗಿರುತ್ತದೆ.

**ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಸಂಬಂಧಿಸಿದಂತೆ:-**

2025 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆ - 01, 02 ಮತ್ತು 03 ರ ಮೌಲ್ಯಮಾಪಕರುಗಳಿಗೆ ಸಂಭಾವನೆ ಮೊತ್ತವನ್ನು ಪಾವತಿ ಮಾಡಿದ ವಿವರಗಳನ್ನು **ಅನುಬಂಧ-1 ಮತ್ತು ಅನುಬಂಧ-2 ರಲ್ಲಿಸಿದೆ.**

ಪರೀಕ್ಷೆ-01 ರ 61,361 ಮೌಲ್ಯಮಾಪಕರುಗಳಿಗೆ ದಿನಾಂಕ:06.06.2025 ರಿಂದ ದಿನಾಂಕ: 20.06.2025 ರ ಅವಧಿಯಲ್ಲಿ ಒಟ್ಟು ರೂ. 35.67 ಕೋಟಿ ಸಂಭಾವನೆ ಮೊತ್ತವನ್ನು ಪಾವತಿಸಲಾಗಿರುತ್ತದೆ.

ಪರೀಕ್ಷೆ-02 ರ 24,433 ಮೌಲ್ಯಮಾಪಕರುಗಳಿಗೆ ದಿನಾಂಕ:14.07.2025 ರಿಂದ ದಿನಾಂಕ:22.07.2025 ರ ಅವಧಿಯಲ್ಲಿ ಒಟ್ಟು ರೂ.9.11 ಕೋಟಿ ಸಂಭಾವನೆ ಮೊತ್ತವನ್ನು ಪಾವತಿಸಲಾಗಿರುತ್ತದೆ.

ಪರೀಕ್ಷೆ- 03 ರ 20,665 ಮೌಲ್ಯಮಾಪಕರುಗಳಿಗೆ ದಿನಾಂಕ:08.08.2025 ರಂದು ಒಟ್ಟು ರೂ. 5.77 ಕೋಟಿ ಸಂಭಾವನೆ ಮೊತ್ತವನ್ನು ಪಾವತಿಸಲಾಗಿರುತ್ತದೆ.

ಬ್ಯಾಂಕ್ ಖಾತೆ ಸಂಖ್ಯೆ ಇತ್ಯಾದಿ ತಪ್ಪಾಗಿ ದಾಖಲಾದ ಕಾರಣ ತಿರಸ್ಕೃತಗೊಂಡ ಮೌಲ್ಯಮಾಪಕರ ಸರಿಯಾದ ಬ್ಯಾಂಕ್ ಖಾತೆ ಮಾಹಿತಿಯನ್ನು ಪಡೆದು ಅವರಿಗೂ ಪಾವತಿಸಲಾಗಿರುತ್ತದೆ.

**ದ್ವಿತೀಯ ಪಿಯುಸಿ ಪರೀಕ್ಷೆಗೆ ಸಂಬಂಧಿಸಿದಂತೆ:-**

2024 - 25 ನೇ ಸಾಲಿನ ಪರೀಕ್ಷಾ ಮೌಲ್ಯಮಾಪಕರುಗಳಿಗೆ ದಿನಭತ್ಯೆ, ಪ್ರಯಾಣ ಭತ್ಯೆ ಮತ್ತು ಸಂಭಾವನೆ ಮೊತ್ತಗಳನ್ನು ನೇರವಾಗಿ ಆಧಾರ್ ಜೋಡಣೆ ಆಗಿರುವ DBT ವೇದಿಕೆಯ ಮೂಲಕ ಪಾವತಿಸುವ ಸಂಬಂಧವಾಗಿ ಇ-ಆಡಳಿತ ಇಲಾಖೆಯ ರವರ ಸಹಕಾರದೊಂದಿಗೆ ದಿನಾಂಕ:09.05.2025 ರಂದು ಸದರಿ ಪ್ರಕ್ರಿಯೆ ಪ್ರಾರಂಭಿಸುವ ಕುರಿತಂತೆ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಇ-ಆಡಳಿತ ಇಲಾಖೆಯ ಅಧಿಕಾರಿಗಳು ಮತ್ತು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿಯ ಅಧಿಕಾರಿಗಳು / ಸಿಬ್ಬಂದಿಯವರುಗಳೊಂದಿಗೆ ಸಮಾಲೋಚನೆ ನಡೆಸಿ DBT ಮೂಲಕ ಸಂಭಾವನೆ ಪಾವತಿಯನ್ನು ಅನುಷ್ಠಾನಗೊಳಿಸಲು ಮಂಡಲಿಯ ತಂತ್ರಾಂಶವನ್ನು 3ನೇ ಪಾರ್ಟಿಯಿಂದ Security Audit ಗೆ ಒಳಪಡಿಸಿ, ಆಯಾ ಮೌಲ್ಯಮಾಪಕರುಗಳಿಗೆ e KYC Authentication ಗಾಗಿ ಆಯಾ ಕಾಲೇಜಿನ ಪ್ರಾಂಶುಪಾಲರ ಲಾಗಿನ್‌ಗಳಲ್ಲಿ ಇಂದೀಕರಿಸಲು ದಿನಾಂಕ:01.08.2025 ರಂದು ಅವಕಾಶ ಕಲ್ಪಿಸಲಾಯಿತು. e KYC Authentication ಗಾಗಿ ಆಯಾ ಕಾಲೇಜಿನ ಪ್ರಾಂಶುಪಾಲರ ಲಾಗಿನ್‌ಗಳಲ್ಲಿ ಇಂದೀಕರಿಸಲು ದಿನಾಂಕ:01.08.2025 ರಂದು ಅವಕಾಶ ಕಲ್ಪಿಸಲಾಯಿತು.

ಅದರಂತೆ, ದಿನಾಂಕ:04.08.2025 ರಿಂದ ದಿನಾಂಕ:08.08.2025 ರವರೆಗೆ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಭಾಗವಹಿಸಿದ ಒಟ್ಟು 39,775 ಮೌಲ್ಯಮಾಪಕರುಗಳಲ್ಲಿ 32,432 ಮೌಲ್ಯಮಾಪಕರುಗಳಿಗೆ DBT ಮೂಲಕ ನೇರವಾಗಿ ಅವರ ಆಧಾರ್ ಜೋಡಣೆ ಆಗಿರುವ ಬ್ಯಾಂಕ್ ಖಾತೆಗೆ ಸಂಭಾವನೆ ಪಾವತಿಸಲಾಗಿರುತ್ತದೆ. ಇನ್ನುಳಿದ 7343 (DBT ತಿರಸ್ಕೃತ 3165 + e- KYC ಪ್ರಕ್ರಿಯೆ ಬಾಕಿ ಇರುವ 4178) ಮೌಲ್ಯಮಾಪಕರ ಸಂಭಾವನೆ ಪಾವತಿಗೆ ದತ್ತಾಂಶವನ್ನು ಸಂಬಂಧಿಸಿದ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರ ಲಾಗಿನ್‌ನಲ್ಲಿ ಒದಗಿಸಲಾಗಿದ್ದು, ಅಗತ್ಯ ಕ್ರಮವಹಿಸುವಂತೆ ಉಪನಿರ್ದೇಶಕರುಗಳಿಗೆ ಸೂಚಿಸಲಾಗಿರುತ್ತದೆ. e-KYC ಪೂರ್ಣಗೊಂಡ ಕೂಡಲೇ ಪಾವತಿಗೆ ನಿಯಮಾನುಸಾರ ಕ್ರಮವಹಿಸಲಾಗುವುದು.

**ಇಪಿ 303 ಎಸ್‌ಎಲ್‌ಬಿ2025**

**(ಎಸ್. ಮಧು ಬಂಗಾರಪ್ಪ)**

**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು.**

ಅನುಬಂಧ-01

**ಎಸ್.ಎಸ್.ಎಲ್.ಸಿ ಪರೀಕ್ಷೆ**

| ಕ್ರ.ಸಂ | ವಿವರ | ಪರೀಕ್ಷೆ-1 | | ಪರೀಕ್ಷೆ-2 | | ಪರೀಕ್ಷೆ-3 | |
|---|---|---|---|---|---|---|---|
| 01 | ಪರೀಕ್ಷಾ ಪ್ರಾರಂಭಗೊಂಡ ಮತ್ತು ಅಂತಿಮಗೊಂಡ ದಿನಾಂಕ | 21-03-2025 ರಿಂದ 04-04-2025 | | 26.05.2025 02-06-2025 | | 05-07-2025 ರಿಂದ 12-07-2025 | |
| 02 | ಮೌಲ್ಯಮಾಪನ ಪ್ರಾರಂಭಗೊಂಡ ಮತ್ತು ಅಂತಿಮಗೊಂಡ ದಿನಾಂಕ | 15-04-2025 ರಿಂದ 25-04-2025 | | 06-06-2025 ರಿಂದ 10-06-2025 | | 17-07-2025 ರಿಂದ 20-07-2025 | |
| 03 | | ಮೌಲ್ಯಮಾಪಕರ ಸಂಖ್ಯೆ | ಸಂಭಾವನೆ ಪಾವತಿಸಿರುವ ಮೌಲ್ಯಮಾಪಕರ ಸಂಖ್ಯೆ | ಮೌಲ್ಯಮಾಪಕರ ಸಂಖ್ಯೆ | ಸಂಭಾವನೆ ಪಾವತಿಸಿರುವ ಮೌಲ್ಯಮಾಪಕರ ಸಂಖ್ಯೆ | ಮೌಲ್ಯಮಾಪಕರ ಸಂಖ್ಯೆ | ಸಂಭಾವನೆ ಪಾವತಿಸಿರುವ ಮೌಲ್ಯಮಾಪಕರ ಸಂಖ್ಯೆ |
| | ಭಾಗವಹಿಸಿದ ಮೌಲ್ಯಮಾಪಕರ ಸಂಖ್ಯೆ ಹಾಗೂ ಸಂಭಾವನೆ ಪಾವತಿ ವಿವರಗಳು | 61,361 | 61,361 ಮೌಲ್ಯಮಾಪಕರುಗಳಿಗೆ 07 ಚೆಕ್‌ಗಳಲ್ಲಿ ದಿನಾಂಕ:30.05.2025, 06.06.2025, 09.06.2025, 11.06.2025, 12.06.2025 16.06.2025 17.06.2025 ರಂದು ನೆಫ್ಟ್ ಮೂಲಕ ಒಟ್ಟು ರೂ.35,67,31,400-00 ಗಳ ಮೊತ್ತವನ್ನು ಪಾವತಿಸಲಾಗಿದೆ | 24,433 | 24,433 ಮೌಲ್ಯಮಾಪಕರುಗಳಿಗೆ 03 ಚೆಕ್‌ಗಳಲ್ಲಿ ದಿನಾಂಕ:14.07.2025, 17.07.2025, 22.07.2025 ರಂದು ನೆಫ್ಟ್ ಮೂಲಕ ಒಟ್ಟು ರೂ.9,11,45,833-00 ಗಳ ಮೊತ್ತವನ್ನು ಪಾವತಿಸಲಾಗಿದೆ | 20665 | 20,665 ಮೌಲ್ಯಮಾಪಕರುಗಳಿಗೆ 01 ಚೆಕ್‌ನಲ್ಲಿ ದಿನಾಂಕ:08.08.2025 ರಂದು ನೆಫ್ಟ್ ಮೂಲಕ ಒಟ್ಟು ರೂ.5,76,64,816-00 ಗಳ ಮೊತ್ತವನ್ನು ಪಾವತಿಸಲಾಗಿದೆ |

ಅಧ್ಯಕ್ಷರು,
ಕೆ.ಎಸ್.ಇ.ಎ.ಬಿ

ಅನುಬಂಧ-02

**<u>ದ್ವಿತೀಯ ಪಿ.ಯು ಪರೀಕ್ಷೆ</u>**

| ಕ್ರ.ಸಂ | ವಿವರ | ಪರೀಕ್ಷೆ-1 | | ಪರೀಕ್ಷೆ-2 | | ಪರೀಕ್ಷೆ-3 | |
|---|---|---|---|---|---|---|---|
| 01 | ಪರೀಕ್ಷಾ ಪ್ರಾರಂಭಗೊಂಡ ಮತ್ತು ಅಂತಿಮಗೊಂಡ ದಿನಾಂಕ | 01-03-2025 ರಿಂದ 20-03-2025 | | 24-04-2025 ರಿಂದ 08-05-2025 | | 09-06-2025 ರಿಂದ 20-06-2025 | |
| 02 | ಮೌಲ್ಯಮಾಪನ ಪ್ರಾರಂಭಗೊಂಡ ಮತ್ತು ಅಂತಿಮಗೊಂಡ ದಿನಾಂಕ | 21-03-2025 ರಿಂದ 02-04-2025 | | 08-05-2025 ರಿಂದ 15-05-2025 | | 02-06-2025 ರಿಂದ 25-06-2025 | |
| 03 | ಭಾಗವಹಿಸಿದ ಮೌಲ್ಯಮಾಪಕರ ಸಂಖ್ಯೆ ಹಾಗೂ ಸಂಭಾವನೆ ಪಾವತಿ ವಿವರಗಳು | ಮೌಲ್ಯಮಾಪಕರ ಸಂಖ್ಯೆ | ಸಂಭಾವನೆ ಪಾವತಿಸಿರುವ ಮೌಲ್ಯಮಾಪಕರ ಸಂಖ್ಯೆ | ಮೌಲ್ಯಮಾಪಕರ ಸಂಖ್ಯೆ | ಸಂಭಾವನೆ ಪಾವತಿಸಿರುವ ಮೌಲ್ಯಮಾಪಕರ ಸಂಖ್ಯೆ | ಮೌಲ್ಯಮಾಪಕರ ಸಂಖ್ಯೆ | ಸಂಭಾವನೆ ಪಾವತಿಸಿರುವ ಮೌಲ್ಯಮಾಪಕರ ಸಂಖ್ಯೆ |
| | | 27,782 | 22442 (ದಿನಾಂಕ:04.08.2025, 05.08.2025, 06.08.2025 ಮತ್ತು 08.08.2025 ರಂದು ಖಜಾನೆಯಿಂದ ಚೆಕ್ ಜಾರಿಯಾಗಿರುತ್ತದೆ. | 8,242 | 6,923 (ದಿನಾಂಕ:07.08.2025, ರಂದು ಖಜಾನೆಯಿಂದ ಚೆಕ್ ಜಾರಿಯಾಗಿರುತ್ತದೆ) | 3,751 | 3,067 (ದಿನಾಂಕ:08.08.2025, ರಂದು ಖಜಾನೆಯಿಂದ ಚೆಕ್ ಜಾರಿಯಾಗಿರುತ್ತದೆ.) |

ಇನ್ನುಳಿದ 7343 (DBT ತಿರಸ್ಕೃತ 3165+e-KYC ಪ್ರಕ್ರಿಯೆ ಬಾಕಿ ಇರುವ 4178) ಮೌಲ್ಯಮಾಪಕರ ಸಂಭಾವನೆ ಪಾವತಿಗೆ ದತ್ತಾಂಶವನ್ನು ಸಂಬಂಧಿಸಿದ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರ ಲಾಗಿನ್‌ನಲ್ಲಿ ಒದಗಿಸಲಾಗಿದ್ದು, e-KYC ಪ್ರಕ್ರಿಯೆ ಪೂರ್ಣಗೊಂಡ ಕೂಡಲೇ ಪಾವತಿಗೆ ಕ್ರಮವಹಿಸಲಾಗುವುದು.

ಅಧ್ಯಕ್ಷರು,
ಕೆ.ಎಸ್.ಇ.ಎ.ಬಿ